ನೀತಿಯನ್ನು ವಿರೋಧಿಸಿ ನಾನು ಸಹ ಸಭಾತ್ಯಾಗ ಮಾಡುತ್ತಿದ್ದೇನೆ.

(ಸನ್ಮಾನ್ಯ ಸದಸ್ಯರಾದ ವಾಟಾಳ್‌ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು: ಈಗ ಶಾಸನ ರಚನೆ. ವಿಧೇಯಕಗಳನ್ನು ಪರ್ಯಾಲೋಚಿಸುವುದು ಮತ್ತು ಅಂಗೀಕರಿಸುವುದು.

(8) ಶಾಸನ ರಚನಾ ಕಾರ್ಯಕಲಾಪ:

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳು ಮೀಸಲಾತಿ) (ತಿದ್ದುಪಡಿ) ವಿಧೇಯಕ, 1997. (ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ)

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಎಂ.ವಿ.ಗುತ್ತೇದಾರ್ (ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ 1997ರ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳು ಮೀಸಲಾತಿ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

(ಪ್ರಸ್ತಾವ ಮಂಡಿಸಲ್ಪಟ್ಟಿತು)

ಅಧ್ಯಕ್ಷರು: ಚರ್ಚೆ ಏನಿಲ್ಲ. ಪ್ರಸ್ತಾವ ಏನೆಂದರೆ,

''ವಿಧಾನ ಪರಿಷತ್ತಿನಿಂದ ಅಂಗೀಕೃತವಾದ 1997ರ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳು ಮೀಸಲಾತಿ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ 2ಕ್ಕೆ ತಿದ್ದುಪಡಿ:

ಶ್ರೀ ಎಂ.ವಿ.ಗುತ್ತೇದಾರ್ (ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೇ, ಖಂಡ 2ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು

ಮಂಡಿಸುತ್ತೇನೆ.

''(1) 4ಎ ಪ್ರಕರಣದಲ್ಲಿ,

(ಎ) (1) ಮತ್ತು (2)ನೇ ಉಪ-ಪ್ರಕರಣಗಳಲ್ಲಿ ''ಅಂಥ ರೀತಿಯಲ್ಲಿ ಮತ್ತು ಅಂಥ ಪ್ರಾಧಿಕಾರಿಗೆ'' ಎಂಬ ಪದಗಳಿಗೆ ''ಮತ್ತು ಅಂಥ ರೀತಿಯಲ್ಲಿ ತಹಶೀಲ್ದಾರನಿಗೆ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) (3) ಮತ್ತು (4)ನೇ ಉಪ-ಪ್ರಕರಣಗಳಲ್ಲಿ ''ನಿಯಮಿಸಿದ ಪ್ರಾಧಿಕಾರಿಯು'' ಎಂಬ ಪದಗಳಿಗೆ ''ತಹಶೀಲ್ದಾರನು'' ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

(2) 4 ಬಿ ಪ್ರಕರಣದಲ್ಲಿ

(ಎ) (1)ನೇ ಉಪ-ಪ್ರಕರಣದಲ್ಲಿ ''ನಿಯಮಿಸಿದ ಪ್ರಾಧಿಕಾರಿಯ'' ಎಂಬ ಪದಗಳಿಗೆ ''ತಹಶೀಲ್ದಾರನ'' ಎಂಬ ಪದವನ್ನು ಮತ್ತು ''ನಿಯಮಿಸಬಹುದಾದಂಥ ಪ್ರಾಧಿಕಾರಿಗೆ'' ಎಂಬ ಪದಗಳಿಗೆ ''ಕಂದಾಯ ಉಪ ವಿಭಾಗದ ಅಸಿಸ್ಟೆಂಟ್ ಕಮೀಷನರಿಗೆ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) (2)ನೇ ಉಪ-ಪ್ರಕರಣದಲ್ಲಿ ''ಅಪೀಲು ವಿಚಾರಣಾ ಪ್ರಾಧಿಕಾರಿಯು'' ಎಂಬ ಪದಗಳಿಗೆ ''ಕಂದಾಯ ಉಪ ವಿಭಾಗದ ಅಸಿಸ್ಟೆಂಟ್ ಕಮೀಷನರನು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(3) 4ಸಿ ಪ್ರಕರಣದಲ್ಲಿ -(3)ನೇ ಉಪ-ಪ್ರಕರಣದಲ್ಲಿ ''ಮೂರು ತಿಂಗಳುಗಳೊಳಗಾಗಿ'' ಎಂಬ ಪದಗಳಿಗೆ ''ಮೂವತ್ತು ದಿನಗೊಳಗಾಗಿ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಪ್ರಸ್ತಾವ ಮಂಡಿಸಲ್ಪಟ್ಟಿತು.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''(1) 4ಎ ಪ್ರಕರಣದಲ್ಲಿ,

(ಎ) (1) ಮತ್ತು (2)ನೇ ಉಪ-ಪ್ರಕರಣಗಳಲ್ಲಿ ''ಅಂಥ ರೀತಿಯಲ್ಲಿ ಮತ್ತು ಅಂಥ ಪ್ರಾಧಿಕಾರಿಗೆ'' ಎಂಬ ಪದಗಳಿಗೆ ''ಮತ್ತು ಅಂಥ ರೀತಿಯಲ್ಲಿ ತಹಶೀಲ್ದಾರನಿಗೆ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) (3) ಮತ್ತು (4)ನೇ ಉಪ-ಪ್ರಕರಣಗಳಲ್ಲಿ '' ನಿಯಮಿಸಿದ ಪ್ರಾಧಿಕಾರಿಯು'' ಎಂಬ ಪದಗಳಿಗೆ ''ತಹಶೀಲ್ದಾರನು'' ಎಂಬ ಪದವನ್ನು

ಪ್ರತಿಯೋಜಿಸತಕ್ಕದ್ದು,

(2) 4ಬಿ ಪ್ರಕರಣದಲ್ಲಿ,

(ಎ) (1)ನೇ ಉಪ-ಪ್ರಕರಣದಲ್ಲಿ ''ನಿಯಮಿಸಿದ ಪ್ರಾಧಿಕಾರಿಯ'' ಎಂಬ ಪದಗಳಿಗೆ ತಹಶೀಲ್ದಾರನ'' ಎಂಬ ಪದವನ್ನು ಮತ್ತು ''ನಿಯಮಿಸಬಹುದಾದಂಥ ಪ್ರಾಧಿಕಾರಿಗೆ'' ಎಂಬ ಪದಗಳಿಗೆ ''ಕಂದಾಯ ಉಪ ವಿಭಾಗದ ಅಸಿಸ್ಟೆಂಟ್ ಕಮೀಷನರಿಗೆ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು,

(ಬಿ) (2)ನೇ ಉಪ-ಪ್ರಕರಣದಲ್ಲಿ ''ಅಪೀಲು ವಿಚಾರಣಾ ಪ್ರಾಧಿಕಾರಿಯು'' ಎಂಬ ಪದಗಳಿಗೆ ''ಕಂದಾಯ ಉಪ ವಿಭಾಗದ ಅಸಿಸ್ಟೆಂಟ್ ಕಮೀಷನರನು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು,

(3) 4ಸಿ ಪ್ರಕರಣದಲ್ಲಿ, -(3)ನೇ ಉಪ-ಪ್ರಕರಣದಲ್ಲಿ ''ಮೂರು ತಿಂಗಳುಗಳೊಳಗಾಗಿ'' ಎಂಬ ಪದಗಳಿಗೆ ''ಮೂವತ್ತು ದಿನಗಳೊಳಗಾಗಿ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ 2 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''ಖಂಡ 2 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ''

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 2 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

''ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರಸಂಹಿತೆ ವಿಧೇಯಕ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ವಿ.ಗುತ್ತೇದಾರ್ (ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕರಿಸಲ್ಪಟ್ಟ, ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ವಿಧೇಯಕ 1997 ಅನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, ''ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕರಿಸಲ್ಪಟ್ಟ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ವಿಧೇಯಕ 1997 ಅನ್ನು ಅಂಗೀಕರಿಸುವುದು''

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನೀವು ಬೇಡ ಎಂದರೂ ಪಾಸ್ ಆಗುತ್ತದೆ. ಇನ್ನು ಎರಡು ದಿನಗಳು ಇವೆ. ನಿಮ್ಮದು ಶಾಪ್ಸ್ ಅಂಡ್ ಎಸ್ಟ್ಯಾಬ್ಲಿಷ್‌ಮೆಂಟ್ ಆ್ಯಕ್ಟ್ ಕೆಳಗಡೆ ಕಾರ್ಮಿಕರ ಇಲಾಖೆಯಿಂದ ತಾವು ಮೂವ್ ಮಾಡುವುದು, ಅದರಲ್ಲಿ ಮಕ್ಕಳ ವಯಸ್ಸನ್ನು ಹೆಚ್ಚು ಮಾಡುವುದು, 12 ಇರುವುದು 14, 15 ಇರುವುದು 18 ಮಾಡುವುದು, ಅದು ಕೊಡಬೇಕು, ಇದು ಕೊಡಬೇಕು ಎಂದು ಇದೆ

ಅಧ್ಯಕ್ಷರು: ಖರ್ಗೆಯವರೆ, ಈಗ ಪಾರ್ಲಿಮೆಂಟರಿ ಅಫೇರ್ಸ್ ಮಂತ್ರಿಗಳು ಏನು ಹೇಳುತ್ತಾರೆ, ಖರ್ಗೆಯವರು ಸಲಹೆ ಕೊಡುತ್ತಿದ್ದಾರೆ ಬಿಲ್ಸ್‌ನ್ನು ನಾಳೆಗೆ ತೆಗೆದುಕೊಳ್ಳಿ ಎಂದು.

ಶ್ರೀ ಎಂ.ಸಿನಾಣಯ್ಯ:(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ): ಮಾನ್ಯ ಅಧ್ಯಕ್ಷರೆ, ಲ್ಯಾಂಡ್ ರೆವಿನ್ಯೂ, ಲ್ಯಾಂಡ್ ರಿಫಾರ್ಮ್ಸ್ ಮೇಲೆ ಚರ್ಚೆ ಆಗಿದೆ, ಅದನ್ನಾದರೂ ಪಾಸ್ ಮಾಡಿಕೊಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಲ್ಯಾಂಡ್ ರೆವಿನ್ಯೂ ಮಸೂದೆ ಬಗ್ಗೆ ಚರ್ಚೆ ಆಗಿಲ್ಲ, ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ಚರ್ಚೆ ಆಗಿದೆ. ನಾಳೆ ಮಾಡಿಕೊಡೋಣ, ನಾವು ಇಲ್ಲ ಎಂದು ಹೇಳುವುದಿಲ್ಲ.

ಶ್ರೀ ಯು.ಬಿ.ಬಣಕಾರ: ಮಾನ್ಯ ಅಧ್ಯಕ್ಷರೆ, ಇದು ಎ.ಪಿ.ಎಂ.ಸಿ. ಆಕ್ಟ್ ವಿಷಯ ಸಮಿತಿಯವರ ಶಿಫಾರಸ್ಸಿನ ಮೇಲೆ ಆಗಿದೆ. ಅವರು ಇಂಟ್ರಡ್ಯೂಸ್ ಮಾಡಿದರೆ ನಾವು ಒಪ್ಪಿಕೊಂಡು ಬಿಡುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಎ.ಪಿ.ಎಂ.ಸಿ. ಬೇಕಾದರೆ

ತೆಗೆದುಕೊಳ್ಳಿ ಅದು ಸರಳವಾಗಿದೆ.

ಅಧ್ಯಕ್ಷರು: ಎ.ಪಿ.ಎಂ.ಸಿ. ಇದು ವಿಷಯ ಸಮಿತಿಯ ಶಿಫಾರಸ್ಸಿನ ಮೇಲೆ ಇರುವುದು, ಅದನ್ನು ತೆಗೆದುಕೊಳ್ಳಿ ನಾವು ಒಪ್ಪಿಕೊಳ್ಳುತ್ತೇವೆ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ

(ಅ) ಚನ್ನರಾಯ ಪಟ್ಟಣದಲ್ಲಿ ಕಳ್ಳತನ

+ ಶ್ರೀ ಸಿ.ಎಸ್.ಪುಟ್ಟೇಗೌಡ (ಶ್ರವಣಬೆಳಗೊಳ): ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ಚನ್ನರಾಯಪಟ್ಟಣ ನಗರದಲ್ಲಿ ನಾನು ವಾಸವಾಗಿರುವ ಕುವೆಂಪು ನಗರದಲ್ಲಿ ರಾತ್ರಿ ಡಕಾಯಿತರು ಬಂದು 4-3 ಮನೆಗಳಲ್ಲಿ ಕಳ್ಳತನ ಮಾಡಿ ಅಲ್ಲಿಯ ಜನರ ಜೀವಕ್ಕೆ ಅಪಾಯವಿರುವಂತಹ ವಾತಾವರಣ ಅಲ್ಲಿ ಉಂಟಾಗಿದೆ. ಅಲ್ಲಿಯ ಜನರಿಗೆ ತಾವು ಮನೆ ಕಟ್ಟಿಸಿಕೊಂಡು ಮನೆಗೆ ಬಾಗಿಲು ಇದ್ದರೂ ಕೂಡ ನಾವು ಬದುಕುವುದು ಹೇಗೆ, ಮಲಗುವುದು ಹೇಗೆ ಎಂಬ ಭಯದ ವಾತಾವರಣ ಉಂಟಾಗಿದೆ. 15 ದಿವಸಗಳ ಹಿಂದೆ ಹೀಗೆ ಕಳ್ಳತನವಾಗಿ ಫಣಿರಾಜ ಎನ್ನುವವರ ಮನೆಗೆ ಕಳ್ಳರು ನುಗ್ಗಿ ಅವರಿಗೆ ಹೊಡೆದಿದ್ದಾರೆ, ಅವರಲ್ಲಿ ಇರುವ ಒಡವೆ ವಸ್ತ್ರಗಳನ್ನು ಕೊಟ್ಟು ಪ್ರಾಣ ಉಳಿಸಿಕೊಂಡಿದ್ದಾರೆ. ಕಳೆದ ರಾತ್ರಿ ರಾಮಕೃಷ್ಣಗೌಡ ಎಂಬ ಸರ್ಕಾರಿ ನೌಕರರ ಮನೆಗೆ ಕಳ್ಳರು ನುಗ್ಗಿದ್ದಾರೆ ಅವರ ಮನೆ ಊರಿನ ಹೊರವಲಯದಲ್ಲಿ ಇದೆ, ಅವರ ಮನೆಗೆ ನುಗ್ಗುವುದಕ್ಕಿಂತ ಮುಂಚೆ ಮೂರು ನಾಲ್ಕು ಮುಸಲ್ಮಾನರ ಮನೆಗಳಿಗೆ ನುಗ್ಗಿ ಕಳ್ಳತನ ಮಾಡಿದ್ದಾರೆ. ಈ ರಾಮಕೃಷ್ಣಗೌಡರವರನ್ನು ಚೆನ್ನಾಗಿ ಹೊಡೆದಿದ್ದಾರೆ. ಅವರ ಹೆಂಡತಿಗೂ ಹೊಡೆದಿದ್ದರಿಂದ ತಲೆಗೆ ಬಹಳ ಪೆಟ್ಟು ಬಿದ್ದು ಪ್ರಾಣ ಹಾನಿಯಾಗಿದೆ. ರಾಮಕೃಷ್ಣೇಗೌಡರು ಈಗ ನಿಮ್ಹಾನ್ಸ್‌ನಲ್ಲಿದ್ದಾರೆ. ಅವರ ಸ್ಥಿತಿ ಚಿಂತಾಜನಕವಾಗಿದೆ. ನಾನು ಹೋಗಿ ನೋಡಿಕೊಂಡು ಬಂದಿದ್ದೇನೆ. ಡಾಕ್ಟರ್ ಅವರ ಚಿಕಿತ್ಸೆ ಮಾಡುತ್ತಿದ್ದಾರೆ. ನಿನ್ನೆ ಶಿಕ್ಷಕರ ದಿನಾಚರಣೆ ಇರುವುದರಿಂದ ನಾನು ಚನ್ನರಾಯಪಟ್ಟಣ ನಗರದಲ್ಲಿಯೇ ಇದ್ದೆ. ಬೆಳಗಿನ ಜಾವ 6 ಗಂಟೆಗೆ ಯಾರೋ ಅಳುತ್ತಾ ಬಂದು ಈ ರೀತಿಯಾಗಿದೆ ಎಂದು ಹೇಳಿದರು, ಸ್ಥಳಕ್ಕೆ ಹೋಗಿ ನೋಡಿದಾಗ ಅಲ್ಲಿಯ ಪರಿಸ್ಥಿತಿ ಬಹಳ ಗಂಭೀರವಾಗಿತ್ತು. ಆ ಡಕಾಯಿತರು ಸಾಮಾನ್ಯರಲ್ಲ, ಅವರು ಬಹಳ ಬುದ್ಧಿವಂತಿಕೆಯಿಂದ, ಚಮತ್ಕಾರದಿಂದ ಕಳ್ಳತನ ಮಾಡಿದ್ದಾರೆ; ಈ ರೀತಿ ಪ್ರಾಣ ತೆಗೆದು ದೋಚಿದಂತಹ ಘಟನೆಯನ್ನು ನಾನು ನನ್ನ ಜೀವನದಲ್ಲಿ ನೋಡಿರಲಿಲ್ಲ, ಸಾಕಷ್ಟು ಅಲ್ಲಿ ಇಲ್ಲಿ ಕಳ್ಳತನ ಆಗಿದ್ದು ಕೇಳಿದ್ದೇನೆ ಆದರೆ ಈ ರೀತಿಯಾಗಿಲ್ಲ. ಅಲ್ಲಿಯ ಜನರಲ್ಲಿ ನಾನಾ ರೀತಿಯಲ್ಲಿ ಚರ್ಚೆ ನಡೆಯುತ್ತಾ ಇತ್ತು, ಈ ಪೋಲೀಸ್‌ನವರ ಕೈಯಲ್ಲಿ ಏನು ಆಗುವುದಿಲ್ಲ, ಇವರಿಂದಲೇ ದರೋಡೆಯಾಗುವುದು, ನಮಗೆ ರಕ್ಷಣೆ ಇಲ್ಲ ಎಂದು ಹೇಳುತ್ತಿದ್ದರು, ಇಲ್ಲಿ ಮಾನ್ಯ ಗೃಹ ಸಚಿವರು ಇದ್ದಾರೆ ದಯಮಾಡಿ ಅದನ್ನು ಬಹಳ